ಮುಖ್ಯವಾಗಿರತಕ್ಕಂಥ ಪ್ರಶ್ನೆ ಇದು. ಆದ್ದರಿಂದ ನಾಳೆ ಅಥವಾ ನಾಡಿದ್ದು ಉತ್ತರ ಕೊಡಿಸುವುದಕ್ಕೆ ವ್ಯವಸ್ಥೆ ಮಾಡಿಸಿ.

ಅಧ್ಯಕ್ಷರು.—ಪ್ರಯತ್ನ ಮಾಡುತ್ತೇನೆ.

ಜ್ಯೂವಲರ್ಸ್ ಬೀದಿಯಲ್ಲಿರುವ ಸಾರಾಯಿ ಅಂಗಡಿಗಳನ್ನು ಮುಚ್ಚುವುದು ಹಾಗೂ ಸ್ಥಳಾಂತರಿಸುವುದರ ಬಗ್ಗೆ

೨೭೦ (೮೧೦) ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಜ್ಯೂವಲರ್ಸ್ ಸ್ಟ್ರೀಟ್ ಸಂಪಂಗಿರಾಮನಗರ ಮತ್ತು ಶಿವಾಜಿನಗರ ರಸ್ತೆಯಲ್ಲಿರುವ ಸಾರಾಯಿ ಅಂಗಡಿಗಳನ್ನು ಮುಚ್ಚಿಸುವ, ಸ್ಥಳಾಂತರಗೊಳಿಸುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರು ನೀಡಿದ ಆದೇಶದ ಪ್ರಕಾರ ಈ ನಿಟ್ಟಿನಲ್ಲಿ ಸಾಧಿಸಿದ ಪ್ರಗತಿಯು ಈಗ ಯಾವ ಹಂತದಲ್ಲಿದೆ ?

ಆ) ಮುಂದಿನ ವಿಳಂಬಕ್ಕೆ ಅವಕಾಶವಾಗದಂತೆ ಮೇಲೆ ತಿಳಿಸಿದ ಸಾರಾಯಿ ಅಂಗಡಿಗಳನ್ನು ಮುಚ್ಚಿಸಲು, ಸ್ಥಳಾಂತರಗೊಳಿಸಲು ಸರ್ಕಾರ ದೃಢ ಮನಸ್ಸು ಹೊಂದಿದೆಯೇ ? ಈ ವಿಷಯದಲ್ಲಿ ಕ್ರಮ ಕೈಗೊಳ್ಳಲು ಅಂತಿಮ ಗಡವು ಯಾವುದು ?

ಇ) ಬೆಂಗಳೂರು ನಗರದಲ್ಲಿ ಸಾರಾಯಿಯ ಚಿಲ್ಲರೆ ವ್ಯಾಪಾರವನ್ನು ಸರ್ಕಾರವೇ ವಶಪಡಿಸಿಕೊಂಡಿದೆ ಮತ್ತು ಸಾರಾಯಿ ವ್ಯಾಪಾರಕ್ಕೆ ನೀಡಿದ ಲೈಸೆನ್ಸ್‌ಗಳನ್ನು ರದ್ದುಪಡಿಸಲಾಗಿದೆ, ಹಾಗೂ ಬೆಂಗಳೂರು ನಗರದಲ್ಲಿ ಸಾರಾಯಿಯ ಚಿಲ್ಲರೆ ವ್ಯಾಪಾರವನ್ನು ನವೀಕರಿಸುವುದಿಲ್ಲವೆಂದು ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿ ಹೇಳಿಕೆ ನೀಡಿದ್ದು ಈ ನೀತಿಯ ಘೋಷಣೆಯಲ್ಲಿ ಏನಾದರೂ ಬದಲಾವಣೆ ಇದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) ಇವರ ಪರವಾಗಿ ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಅ) ೧೯೯೩-೯೪ನೇ ಸಾಲಿಗೆ ಈ ಅಂಗಡಿಗಳಿಗೆ ಸನ್ನದುಗಳನ್ನು ನೀಡಲಾಗಿದೆ. ಈ ಅಂಗಡಿಗಳನ್ನು ಮುಚ್ಚಿಸುವ ಸ್ಥಳಾಂತರಿಸುವ ವಿಷಯವು ಪರಿಶೀಲನೆಯಲ್ಲಿದ್ದು ಮುಂದಿನ ವರ್ಷ ಅಂದರೆ ೧೯೯೪-೯೫ನೇ ಸಾಲಿಗೆ ಸನ್ನದುಗಳನ್ನು ನೀಡುವುದಕ್ಕೆ ಮುಂಚೆ ಇತ್ಯರ್ಥ ಮಾಡಲಾಗುವುದು.

ಆ) ೧೯೯೪-೯೫ನೇ ಸಾಲಿಗೆ ಸನ್ನದುಗಳನ್ನು ನೀಡುವುದಕ್ಕೆ ಮುಂಚೆ ಈ ವಿಷಯದಲ್ಲಿ ಸಂಪೂರ್ಣವಾಗಿ ಪರಿಶೀಲಿಸಲಾಗುವುದು,

ಇ) ೩-೩-೧೯೯೪ ರಿಂದ ೧೬-೩-೧೯೯೪ ರವರೆಗೆ ಬೆಂಗಳೂರಿನಲ್ಲಿ ಸಾರಾಯಿ ವ್ಯಾಪಾರವನ್ನು ಸರ್ಕಾರವೇ ವಹಿಸಿಕೊಂಡಿತ್ತು. ೧೭.೩.೯೪ ರಿಂದ ಖಾಸಗಿ ಸಂಸ್ಥೆಗೆ ಮಧ್ಯಂತರವಾಗಿ ವಹಿಸಿಕೆ ಮಾಡಲಾಗಿದೆ.

ಶ್ರೀ ಎ.ಕೆ. ಅನಂತಕೃಷ್ಣ.—ಮಾನ್ಯ ಅಧ್ಯಕ್ಷರೇ, ನನಗೆ ಮಾನ್ಯ ಮುಖ್ಯಮಂತ್ರಿಗಳು ಕಾಗದವನ್ನು ಬರೆದು ಬಹಳ ಖಚಿತವಾಗಿ ಇದನ್ನು ಮುಚ್ಚುತ್ತೇವೆ, ಮುಚ್ಚುವುದಕ್ಕೆ ಆದೇಶವನ್ನು ಕೊಟ್ಟಿದ್ದೇನೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಎಂದು ಹೇಳಿದ್ದಾರೆ. ಒಂದಲ್ಲ, ಮೂರು ಕಾಗದಗಳು ಬಂದಿವೆ. ಒಂದೊಂದು ಕಾಗದ ಒಂದೊಂದು ತರಹ ಇದೆ. ಈಗ ೨೬ನೇ ತಾರೀಖಿಗೆ ಬರೆದ ಕಾಗದದಲ್ಲಿ ಬಹಳ ಖಚಿತವಾಗಿ ಹೇಳಿದ್ದಾರೆ. ಇದರಲ್ಲಿ ಏನು ಹೇಳುತ್ತಾರೆ ಎಂದರೆ ಎಕ್ಸ್‌ಪಿನ್ ಮಾಡುತ್ತೇವೆ, ಸೂಕ್ತ ಸಮಯದಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಇದಕ್ಕೆ ಅರ್ಥ ಏನು ? ಮತ್ತು ಇನ್ನೊಂದು ಪ್ರಶ್ನೆಯನ್ನು ಹಾಕಿ ತಾವು ಏನೊಂದು ಪಾಲಿಸಿಯನ್ನು ಡಿಕ್ಲೇರ್ ಮಾಡಿದ್ದೀರಿ, ಅದರಲ್ಲಿ ಬದಲಾವಣೆ ಇದೆಯೇ ಏನನ್ನುವುದನ್ನು ಕೇಳಿದ್ದೇನೆ. ಆವಕ್ಕೂ ಉತ್ತರ ಇಲ್ಲ. ತಮಗೆ ತಿಳಿದ ಹಾಗೆ ಈ ಸಾರಾಯಿ ಅಂಗಡಿಗಳನ್ನು ನಡೆಸುವುದು ಹಾಗೂ ಮುಚ್ಚುವುದರ ವಿಷಯವಾಗಿ ಬಹಳ ಪ್ರಮುಖವಾದ ಒಂದು ಪಾಲಿಸಿಯಾಗಿದೆ. ಈ ಪಾಲಿಸಿಗಾಗಿ ಏನೇ ಹೇಳಬೇಕಾಗಿದ್ದರೂ ಬಹಳ ಖಚಿತವಾಗಿ ಹೇಳಬೇಕಾಗಿದೆ. ಜನತೆ ಕೂಡ ಅದನ್ನು ಖಚಿತವಾದ ನಿಮ್ಮ [illegible] ಏನನ್ನುವುದನ್ನು ನಿರೀಕ್ಷೆ ಮಾಡುತ್ತಾರೆ. ನಾವು ಕಾಗದ ಬರೆದಿರುವುದು ಈ ಸದನದಲ್ಲಿ

ಪದೇ ಪದೇ ಕೇಳುತ್ತಿರುವುದು ಖಚಿತವಾದ ಉತ್ತರಕ್ಕಾಗಿಯೇ ? ಅದಕ್ಕೆ ಜವಾಬನ್ನು ಸರಿಯಾಗಿ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಮಾನ್ಯ ಅಧ್ಯಕ್ಷರೇ, ಸರ್ಕಾರದ ಧೋರಣೆಯಲ್ಲಿ ಯಾವ ಬದಲಾವಣೆಯೂ ಇಲ್ಲ. ದೇವಸ್ಥಾನಗಳು, ಮಸೀದಿಗಳು, ಶಾಲಾ ಕಾಲೇಜುಗಳ ಹೆಚ್ಚಾಗಿ ಪೂಜಾ ಸ್ಥಳಗಳ ಪಕ್ಕದಲ್ಲಿ ಸಾರಾಯಿ ಅಂಗಡಿಗಳನ್ನು ತೆರೆಯುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಸರ್ಕಾರ ಏನು ನಿರ್ಧಾರ ಮಾಡಿದೆ. ಅದರಲ್ಲಿ ಯಾವ ಬದಲಾವಣೆಯೂ ಇಲ್ಲ. ಮುಖ್ಯಮಂತ್ರಿಗಳ ಪತ್ರದ ವಿಚಾರ ಪ್ರಸ್ತಾಪ ಮಾಡಿದ್ದಾರೆ. ಅವರು ಬರೆದಿರುವುದು ನಿಜ. ಇದರಲ್ಲಿ ಕ್ರಮ ಕೈಗೊಳ್ಳಲಾಗುವುದು ಅಂದರೆ ಕ್ರಮ ಕೈಗೊಳ್ಳುವ ಸಂದರ್ಭದಲ್ಲಿ ಒಂದು ವರ್ಷಕ್ಕೆ ಹರಾಜು ಮಾಡಿರುತ್ತಾರೆ. ಆ ಹರಾಜು ಮಧ್ಯದಲ್ಲಿ ನಿಲ್ಲಿಸಿದ್ದರೆ ಸರ್ಕಾರದ ಮೇಲೆ ನಷ್ಟಕ್ಕೊಳಗಾಗಿ ಅವರು ಕ್ರಮ ತೆಗೆದು ಕೊಳ್ಳುತ್ತಾರೆ. ಹೇಗಿದ್ದರೂ ಈ ಸಾರಾಯಿ ಜೂನ್ ಸಮಯದಲ್ಲಿ ಪುನಃ ಹರಾಜಿಗೆ ಬರುತ್ತದೆ. ಆ ಸಮಯದಲ್ಲಿ ಈ ದೇವಸ್ಥಾನಗಳ ಪಕ್ಕದಲ್ಲಿ ಹೆಚ್ಚಾಗಿ ಪೂಜಾಸ್ಥಳಗಳ ಪಕ್ಕದಲ್ಲಿ ಇರುವುದನ್ನು ಬಿಟ್ಟು ಬೇರೆ ಕಡೆ ಪ್ರಾರಂಭ ಮಾಡುವುದಕ್ಕೆ ಮಾತ್ರ ಸರ್ಕಾರ ಅವಕಾಶ ಕೊಡುತ್ತದೆ. ಮಾನ್ಯ ಸದಸ್ಯರು ಹೇಳಿರತಕ್ಕಂಥ ಎರಡು-ಮೂರು ಸ್ಥಳಗಳ ಬಗ್ಗೆ ಕೂಡ ಸರ್ಕಾರ ಪರಿಶೀಲನೆ ಮಾಡಿ ಕೆಲವು ಅಂಗಡಿಗಳನ್ನು ಮುಂದಿನ ಹರಾಜಿನಲ್ಲಿ ಕೈ ಬಿಟ್ಟು ಹರಾಜು ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ.

ಶ್ರೀ ಎ. ಕೆ. ಅನಂತಕೃಷ್ಣ.—ಮಾನ್ಯ ಅಧ್ಯಕ್ಷರೇ, ನನಗಂತೂ ಈ ಉತ್ತರ ಸಮಂಜಸವಾಗಿಲ್ಲ. ನಾನು ಕೇಳುತ್ತಿರುವುದು ಮಾನ್ಯ ಮುಖ್ಯಮಂತ್ರಿಗಳು ಇದನ್ನು ಮುಚ್ಚುತ್ತೇವೆ, ಮುಚ್ಚುವುದಕ್ಕೆ ಆದೇಶವನ್ನು ಕೊಟ್ಟಿದ್ದೇವೆ ಎಂದು ಹೇಳಿ ಬರೆದಿದ್ದಾರೆ. ಅಂದರೆ ಇದನ್ನು ಮತ್ತೆ ಪರಿಶೀಲನೆ ಮಾಡುವ ಪ್ರಶ್ನೆ ಬರುವುದಿಲ್ಲ. ಆ ಪತ್ರವನ್ನು ನಾನು ಓದುತ್ತೇನೆ. ಆದರೂ ವಿಶೇಷವಾಗಿ ಮಾನ್ಯ ಸಂಸದೀಯ ವ್ಯವಹಾರ ಮಂತ್ರಿಗಳು ಆ ರೀತಿಯ ಜವಾಬನ್ನು ಕೊಡುತ್ತಾರೋ ನನಗಂತೂ ಅರ್ಥವಾಗುತ್ತಿಲ್ಲ. "ತಾವು ಕೋರಿರುವಂತೆ ಸದರಿ ಸಾರಾಯಿ ಅಂಗಡಿಗಳನ್ನು ನಿಲ್ಲಿಸುವಂತೆ ತಕ್ಷಣವೇ ಕ್ರಮವನ್ನು ಕೈಗೊಂಡು ಅಬ್ಕಾರಿ ಆಯುಕ್ತರಿಗೆ ಸೂಚಿಸಿದ್ದೇನೆ" ಇದು ಬರೆದಿರುವುದು ಅವರಿಗೆ ಗೊತ್ತಿದೆ. ಈ ರೀತಿ ಮಾಡಿದರೆ ಹೇಗೆ ? ಮತ್ತೆ ನಾನು ಕೇಳುವುದು ಅಂಗಡಿಗಳು ದೇವಸ್ಥಾನದ ಹತ್ತಿರ ಮತ್ತೊಂದು ಅಲ್ಲ ನಾನು ಹೇಳಿದ್ದು. ಈ ಪ್ರಶ್ನೆ ಏನಿದೆ ಎಂದರೆ ಈ ಪ್ರೈವೇಟ್ ಪಿಂಡಾರ್ಸ್‌ಗೆ ಏನು ಲೈಸೆನ್ಸ್ ಕೊಟ್ಟಿದ್ದೇವೆ, ಅದನ್ನು ಕ್ಯಾನ್ಸಲ್ ಮಾಡಿದ್ದೇವೆ ಇನ್ನೂ ಅದನ್ನು ರಿನ್ಯೂ ಮಾಡುವುದಿಲ್ಲ ಎಂದು ಈ ಸದನದಲ್ಲೂ ಮತ್ತು ಬೇರೆ ಕಡೆಗಳಲ್ಲೂ ಮಾನ್ಯ ಮುಖ್ಯ ಮಂತ್ರಿಗಳು ತೀವ್ರವಾದ ತೀರ್ಮಾನವನ್ನು ಹೇಳಿದ್ದಾರೆ. ಆದರಲ್ಲಿ ಮತ್ತೆ ಆವರೇ ಖಾಸಗಿಯವರಿಗೆ ೩-೨-೯೪ರಿಂದ ೧೬-೨-೯೪ ರಲ್ಲಿ ಮಾಡಿದ್ದು, ಅದನ್ನು ಕೊಟ್ಟಿದ್ದೇವೆ ಎಂದು ಹೇಳಿ ಬರೆದಿದ್ದಾರೆ. ಅಲ್ಲಿ there is a shift in the declared policy ಎಂದು ನನ್ನ ಭಾವನೆಯಲ್ಲಿದೆ. ಅದು ಇನ್ನೂ ಷಿಫ್ಟ್ ಆಗಿದೆಯೇ ಇಲ್ಲವೇ ? ಎನ್ನುವುದು ನನ್ನ ಪ್ರಶ್ನೆ. ಇಲ್ಲದಿದ್ದರೆ ಇದು ಸಂಶಯಕ್ಕೆ ಕಾರಣವಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ತೀರ್ಮಾನವನ್ನು ತೀವ್ರವಾಗಿ ಹೇಳಿದ್ದಾರೆ, ಎಕ್ಸೈಜ್ ಲಾಬಿ ಸಂಭಂಧ ನಾನು ಇಲ್ಲ, ನಾನು ಅದರ ವಿರುದ್ಧವಾಗಿದ್ದೇನೆ ಎಂದು ಹಾಗೂ ನಾನು ಸಾರ್ವಜನಿಕ ಹಿತದೃಷ್ಟಿಯಿಂದ ಕೆಲಸ ಮಾಡುತ್ತೇನೆ ಎಂದು ಹೇಳಿದ್ದಾರೆ. ಈ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ನಾವು ಸಾಕಷ್ಟು ಬೆಂಬಲವನ್ನು ಕೊಡುತ್ತೇವೆ ಎಂಬ ಮಾತನ್ನು ಹೇಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಇರತಕ್ಕಂಥ ಉದ್ದೇಶದಲ್ಲಿ ಬೆಂಗಳೂರು ನಗರದಲ್ಲಿ ಇದ್ದ ಕಂಟ್ರಾಕ್ಟರ್‌ಗಳಿಗೆ ೨-೨-೯೪ ರಲ್ಲಿ ಅದರ ಗುತ್ತಿಗೆಯನ್ನು ರದ್ದು ಮಾಡಲಾಗಿದೆ. ಕೆಲವು ದಿವಸ ಇಲಾಖೆಯೇ ವ್ಯಾಪಾರ ಮಾಡಿತ್ತು. ಮತ್ತೆ ೧೭-೨-೯೪ ರಿಂದ ಅದನ್ನು ವ್ಯಾಪಾರ ಮಾಡುವ ಒಂದು ಪಕ್ಕನ್ನು ಬೇರೆ ಒಂದು ಸಂಸ್ಥೆಗೆ ಮತ್ತೆ ಅದನ್ನು ವಹಿಸಲಾಯಿತು. ಆದುದರಿಂದ ಸರ್ಕಾರದ ವಶದಲ್ಲಿನ್ನುದು ಕೇವಲ ಸ್ವಲ್ಪ ಕಾಲ ಮಾತ್ರ. ಬೇರೆ ಗುತ್ತಿಗೆದಾರರಿಗೆ ಅದನ್ನು ವಹಿಸಿರುವುದರಿಂದ ಪುನಃ ಹರಾಜು ಮಾಡುವ ಕಾಲದವರೆಗೆ ಅವರನ್ನು

ತೆಗೆಯುವುದು ಕಷ್ಟವಾಗುತ್ತದೆ. ಆದರೂ ಕೂಡ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಬರುವ ವರ್ಷದ ಜೂನ್ ತಿಂಗಳಿನಿಂದ ಕೆಲವು ಅಂಡಿಗಳನ್ನು ಮುಚ್ಚಿಸುವುದಕ್ಕೆ ಸರ್ಕಾರ ಮುಖ್ಯ ಮಂತ್ರಿಯವರ ಆದೇಶದಂತೆ ಜಾರಿಗೆ ತರಬೇಕಾದರೆ ಕೆಲವು ಕಾನೂನು ಪ್ರಕ್ರಿಯೆಗಳನ್ನು ಮಾಡಿ ನಿಲ್ಲಿಸಬೇಕು. ಆ ಕಾನೂನು ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಇಲಾಖೆ ಪ್ರಯತ್ನಿಸುತ್ತಿದೆ.